**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ.ಸಿ. 55/2019**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ತರೀಕೆರೆ ಪೊಲೀಸರು

-ವಿರುದ್ಧ-

ಆರೋಪಿ/ತರು ಃ ಶ್ರೀಮತಿ ಇಂದಿರಾಬಾಯಿ

-ಃದೋಷಾರೋಪಣೆಃ-

ಶ್ರೀ ನಂಜೇಗೌಡ ಎಂ.ಸಿ., ಬಿ.ಎ.ಎಲ್., ಎಲ್.ಎಲ್.ಎಂ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ ಆದ ನಾನು ಈ ಕೆಳಗೆ ಕಾಣಿಸಿರುವಃ

ಶ್ರೀಮತಿ ಇಂದಿರಾಬಾಯಿ ಕೋಂ ರಂಗನಾಥ, 36 ವರ್ಷ,
ಬೇಲೇನಹಳ್ಳಿ ತಾಂಡ್ಯ, ತರೀಕೆರೆ ತಾಲ್ಲೂಕು.

ನಿಮ್ಮ ಮೇಲೆ ಆರೋಪಿಸುವುದೇನೆಂದರೆಃ-

ತರೀಕೆರೆ ತಾಲ್ಲೂಕು, ತರೀಕೆರೆ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಬೇಲೇನಹಳ್ಳಿ ತಾಂಡ್ಯದಲ್ಲಿ ಆರೋಪಿಯಾದ ನೀವು ಹಲವಾರು ವರ್ಷಗಳಿಂದ ನೋಂದಣಿ ಮಾಡಿಸದೇ ಚೀಟಿಗಳನ್ನು ನಡೆಸುವ ಏಜೆಂಟ್ ಆಗಿ 30-35 ಜನರನ್ನು ಸೇರಿಸಿಕೊಂಡು ಚೀಟಿಯನ್ನು ನಡೆಸಿ ಚಾಸಾ-1 ಲಕ್ಷ್ಮೀ ರೈ ಮತ್ತು ಇತರರಿಂದ ಪ್ರತಿ ತಿಂಗಳು ಚೀಟಿ ಕಂತುಗಳನ್ನು ಪಡೆದುಕೊಂಡು, ಚಾಸಾ-1 ರವರು ನಿವೃತ್ತಿಯಾದ ನಂತರ 2015 ನೇ ಸಾಲಿನಲ್ಲಿ ಚೀಟಿಯ ಹಣವನ್ನು ವಾಪಾಸ್ಸು ಕೊಡಲು ಕೇಳಿದಾಗ ಅವರಿಗೆ ಯಾವುದೇ ಹಣವನ್ನು ಕೊಡಬೇಕಾಗಿಲ್ಲವೆಂದು ಈಗಾಗಲೇ ಹಣವನ್ನು ಕೊಟ್ಟಿದ್ದೇನೆಂದು ಹೇಳಿ ಚಾಸಾ-1 ರವರು ನೀಡಿದ ರೂ.3,55,000/-ಹಣವನ್ನು ಕೊಡದೇ ದುರ್ಬಳಕೆ ಮಾಡಿಕೊಂಡು ಮೋಸ ಮಾಡಿ, ಆ ಮೂಲಕ ನೀವು ಕಲಂ.3 ಮತ್ತು 5 ಪ್ರೈಸ್ ಚಿಟ್ಸ್ ಮನಿ ಸರ್ಕ್ಯುಲೇಷನ್ ಸ್ಕೀಮ್ (ಬ್ಯಾನಿಂಗ್) ಆಕ್ಟ್, ಕಲಂ.4, 5, 11 ಮತ್ತು ಕಲಂ.76 ಚಿಟ್ ಫಂಡ್ಸ್ ಆಕ್ಟ್ ಹಾಗೂ ಭಾರತೀಯ ದಂಡ ಸಂಹಿತೆಯ ಕಲಂ.420 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಎಸಗಿರುತ್ತೀರಿ.

ಆದುದರಿಂದ ಆರೋಪಿಯಾದ ನೀವು ಮೇಲ್ಕಂಡ ಆರೋಪಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ14.08.2019

Sd/-

(ನಂಜೇಗೌಡ ಎಂ.ಸಿ.)
ಹಿ. ಪ್ರಧಾನ ಪ್ರದನ್ಯಾದಂ, ತರೀಕೆರೆ.

ಪ್ರ: 1) ಈಗ ಓದಿ ಹೇಳಿದ ನಿಮ್ಮ ಮೇಲೆ ಮಾಡಿರುವ ಆರೋಪಿಗಳು ತಿಳಿಯಿತೆ ?
ಉಃ ಹೌದು.

ಪ್ರಃ 2) ಸದರಿ ಆರೋಪಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?
ಉಃ ಸುಳ್ಳು, ವಿಚಾರಣೆ ಆಗಬೇಕು.

(ಆರೋಪವನ್ನು ಆರೋಪಿ/ತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕಃ14.08.2019

Sd/-
ಹಿ. ಪ್ರಧಾನ ಪ್ರ.ದ.ನ್ಯಾದಂ ತರೀಕೆರೆ.

ಆರೋಪಿ ಸಹಿಃ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರದನ್ಯಾದಂ,ರವರ ನ್ಯಾಯಾಲಯ, ತರೀಕೆರೆ.

**ಸಿ.ಸಿ.553/2017**

ಆರೋಪಿ ಸಂಖ್ಯೆ ಃ

| | | |
|---|---|---|
| ಆಪಾದಿತರ ಹೆಸರು | ಃ | ಅಫ್ರೋಜ್ |
| ತಂದೆ ಹೆಸರು | ಃ | ಅಹಮದ್ ಜಾನ್ |
| ವಯಸ್ಸು | ಃ | 37 |
| ಉದ್ಯೋಗ | ಃ | ಪೈಂಟಿಂಗ್ |
| ವಾಸಸ್ಥಳ | ಃ | ಮೂರ್ತಿಹಾಳ್, ಕಡೂರು ಟೌನ್ |

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ **251** ಅಡಿ ಪ್ರಕಾರ ಆರೋಪಿಯ ಹೇಳಿಕೆಃ</u>

ಪ್ರಃ 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃ

ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉಃ

ಮೇಲಾಣಿಸಿದ ಹೇಳಿಕೆಯನ್ನು ದಿನಾಂಕ ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು ಸದರಿ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

ಹಿ. ಪ್ರಧಾನ ಪ್ರ.ದ.ನ್ಯಾದಂ ತರೀಕೆರೆ.